ನಗರದಲ್ಲಿಯೇ ಕೃಷಿಕರಾಗಿ ಖುಷಿ ಪಡಿ!

ಇದು ಆರೋಗ್ಯ ಸ್ನೇಹಿ ಬೆಂಗಳೂರಿಗರ ಹೊಸ ಟ್ರೆಂಡ್

ಕೃಷಿಗೆ ಏಕೆ ಬೇಡಿಕೆ?

- ಕೃಷಿ ಭೂಮಿಯಲ್ಲಿ ಪರಿಸರದ ಜೊತೆ ಕಳೆಯುವ ಖುಷಿ.
- ಲಾಕ್‌ಡೌನ್‌ನಂತಹ ಸಮಯದಲ್ಲಿ ನಿಶ್ಚಿಂತೆಯಿಂದ ವಾಸಿಸಲು ಸೂಕ್ತ.
- ರಾಸಾಯನಿಕದ ಹಂಗಿಲ್ಲದ ನೈಸರ್ಗಿಕ ತರಕಾರಿ, ಹಣ್ಣು, ಸೊಪ್ಪು ಬೆಳೆಯಬಹುದು.
- ಫಾರ್ಮ್ ಲ್ಯಾಂಡ್‌ನಲ್ಲಿ ಫಾರ್ಮ್ ಹೌಸ್ ನಿರ್ಮಿಸಿಕೊಂಡು ನೆಮ್ಮದಿಯಿಂದ ವಾಸಿಸಬಹುದು.
- ಬೆಳೆಬಾಳುವ ಗಿಡಮರಗಳನ್ನು ಬೆಳೆದು ಆದಾಯ ಗಳಿಸಲೂ ಅವಕಾಶ.
- ಭವಿಷ್ಯದಲ್ಲಿ ಫಾರ್ಮ್ ಲ್ಯಾಂಡ್‌ಗಳಿಗೆ ಉತ್ತಮ ದರ.

ಐಟಿ ಕಂಪನಿಯೊಂದರ ಉದ್ಯೋಗಿ ಪ್ರದೀಪ್ ಮತ್ತು ಸ್ನೇಹಿತರಿಗೆ ವಾರಾಂತ್ಯ ಬಂತೆಂದರೆ ಕೃಷಿ ಮಾಡುವ ಖುಷಿಯೋ ಖುಷಿ. ಮೊದಲೆಲ್ಲ ಇವರು ಗುಂಪಾಗಿ ಚಾರಣ ಹೊರಡುತ್ತಿದ್ದರು. ಆದರೆ, ಈಗ ನಗರದೊಳಗೇ ಇರುವ ಪ್ರದೀಪನ ಪುಟ್ಟ ಫಾರ್ಮ್‌ಲ್ಯಾಂಡ್‌ಗೆ ಹೋಗಿ ಅಲ್ಲಿ ಕೃಷಿ ಕೆಲಸ ಮಾಡುತ್ತಿದ್ದಾರೆ. ಕೃಷಿಯ ಕುರಿತು ತಾವೆಲ್ಲೋ ಓದಿದ್ದನ್ನು, ನೋಡಿದ್ದನ್ನು ಇಲ್ಲಿ ಪ್ರಯೋಗ ಮಾಡುತ್ತಾರೆ. ಕೊನೆಗೆ ತಾವೇ ಬೆಳೆದ ತರಕಾರಿ, ಹಣ್ಣು-ಹಂಪಲು ತಿಂದು ತೃಪ್ತಿ ಪಡುತ್ತಾರೆ. ಪ್ರದೀಪ್‌ನಂತೆ ಕೆ. ಸ್ನೇಹ ಮತ್ತು ಎಲ್. ಸುಶಾಂತ್ ದಂಪತಿ ಕೂಡ ನಗರದೊಳಗೇ ಕೃಷಿ ಭೂಮಿ ಖರೀದಿಸಿದ್ದಾರೆ. ಹೌದು, ಈಗ ಬೆಂಗಳೂರಿನಲ್ಲಿ ಸ್ವಂತ ಮನೆ ಖರೀದಿ, ಸ್ವಂತ ನಿವೇಶನ ಖರೀದಿಯಂತೆಯೇ ಸ್ವಂತ ಫಾರ್ಮ್‌ಲ್ಯಾಂಡ್ ಹೊಂದುವುದು ಕೂಡ ಟ್ರೆಂಡ್ ಆಗುತ್ತಿದೆ.

ವಾರಾಂತ್ಯ ಮಾತ್ರವಲ್ಲ ನಗರಕ್ಕೆ ಹತ್ತಿರದಲ್ಲಿರುವ ಕೃಷಿಭೂಮಿಗಳಲ್ಲಿ ಅಥವಾ ನಗರದೊಳಗೆ ಇರುವ ಕೃಷಿ ಭೂಮಿಗಳಲ್ಲಿ ಒಂದು ಫಾರ್ಮ್ ಹೌಸ್ ಕಟ್ಟಿಕೊಂಡು ಅಥವಾ ಡೆವಲಪರ್‌ಗಳ ಬಳಿ ಫಾರ್ಮ್ ಹೌಸ್ ಕಟ್ಟಿಸಿಕೊಂಡು ಅಲ್ಲಿಯೇ ವರ್ಕ್ ಫ್ರಮ್ ಹೋಮ್ ಮಾಡುವವರು ಅಥವಾ ಅಲ್ಲಿಂದಲೇ ಪ್ರತಿನಿತ್ಯ ಉದ್ಯೋಗಕ್ಕೆ ಹೋಗುವವರೂ ಸಾಕಷ್ಟು ಜನರಿದ್ದಾರೆ. ಬೆಳಗ್ಗೆ ಎದ್ದು ಗಿಡಗಳಿಗೆ ನೀರುಣಿಸಿ, ತರಕಾರಿ, ಸೊಪ್ಪು ಬೆಳೆಯುತ್ತಾ, ಕೆಲಸಕ್ಕೂ ಹೋಗಿ ಬರುವವರ ಸಂಖ್ಯೆ ಹೆಚ್ಚುತ್ತಿದೆ. ಕೊರೊನಾ ನಂತರ ಕೃಷಿಯತ್ತ ಒಲವು ಬೆಳೆಸಿಕೊಳ್ಳುತ್ತಿರುವವರ ಸಂಖ್ಯೆ ಹೆಚ್ಚುತ್ತಿದೆ.

ನೈಸರ್ಗಿಕ ಕೃಷಿಯ ಜತೆಗೆ ಆದಾಯ

ಫಾರ್ಮ್ ಲ್ಯಾಂಡ್ ಹೊಂದುವುದು ವಾರಾಂತ್ಯ ಖುಷಿಗೆ ಮಾತ್ರ ಸೀಮಿತವಾಗಿಲ್ಲ, ''ಕೃಷಿ ಭೂಮಿಯಲ್ಲಿ ಹಣ್ಣು ತರಕಾರಿ, ಸೊಪ್ಪು, ಗಿಡಮೂಲಿಕೆಗಳನ್ನು ಬೆಳೆದು ಪ್ರತಿನಿತ್ಯದ ಆಹಾರ ಅವಶ್ಯಕತೆಗಳನ್ನು ಪೂರೈಸಿಕೊಳ್ಳಬಹುದು. ವಿಶೇಷವಾಗಿ ಯಾವುದೇ ರಾಸಾಯನಿಕಗಳನ್ನು ಬಳಸದೆ ನೈಸರ್ಗಿಕ ಕೃಷಿಯಿಂದ ಬೆಳೆದ ಆಹಾರವು ಆರೋಗ್ಯಕ್ಕೂ ಒಳ್ಳೆಯದು. ನೈಸರ್ಗಿಕವಾಗಿ ತಾವೇ ಬೆಳೆದ ಸೊಪ್ಪು ತರಕಾರಿಗಳನ್ನು ಸೇವಿಸಿ ಆರೋಗ್ಯವಂತರಾಗಿರಲು ಎಲ್ಲರೂ ಬಯಸುತ್ತಾರೆ. ಅಲ್ಲದೆ, ಇಂತಹ ಫಾರ್ಮ್ ಲ್ಯಾಂಡ್‌ಗಳಲ್ಲಿ ಬೆಲೆಬಾಳುವ ಗಿಡಮರಗಳನ್ನು ಬಳಸಿ ಒಳ್ಳೆಯ ಆದಾಯವನ್ನು ಹೊಂದಬಹುದು''ಎಂದು ಎಎಸ್‌ಬಿ ಗ್ರೂಪ್ ಆಫ್ ಕಂಪೆನಿಸ್ ಚೇರ್ಮನ್ ಎಸ್. ಭಗಿರಥ ಹೇಳಿದ್ದಾರೆ.

''ವರ್ಷಗಳು ಕಳೆದಂತೆ ನಗರಕ್ಕೆ ಹತ್ತಿರದಲ್ಲಿರುವ ಕೃಷಿಭೂಮಿಗಳ ಬೆಲೆಯೂ ಹತ್ತಾರು ಪಟ್ಟು ಹೆಚ್ಚುತ್ತಲೇ ಇರುತ್ತದೆ. ನೈಸರ್ಗಿಕ ಕೃಷಿ ಮಾಡುವುದರ ಜತೆಗೇ ಉದ್ಯೋಗ ಮಾಡಿಕೊಂಡು, ಲಾಕ್‌ಡೌನ್‌ನಂತಹ ಸಮಯದಲ್ಲಿಯೂ ಯಾವುದೇ ಚಿಂತೆಯಿಲ್ಲದೆ ಜೀವನ ಸಾಗಿಸಲು ಬಯಸುವವರು ಫಾರ್ಮ್ ಲ್ಯಾಂಡ್ ಹೊಂದಲು ಬಯಸುತ್ತಿದ್ದಾರೆ'' ಎಂದು ವಿವರಿಸಿರುವ ಅವರು, ''ಇಂತಹ ಫಾರ್ಮ್ ಹೌಸ್‌ಗಳನ್ನು ಹೊಂದುವುದು ಪ್ರತಿಷ್ಠೆಯ ವಿಷಯವೂ ಹೌದು. ಮೊದಲೆಲ್ಲ ಗಣ್ಯ ವ್ಯಕ್ತಿಗಳು ಮಾತ್ರ ನಗರದಲ್ಲಿ ಫಾರ್ಮ್ ಹೌಸ್ ಹೊಂದಿರುತ್ತಿದ್ದರು. ಈಗ ಎಲ್ಲರೂ ಫಾರ್ಮ್ ಹೌಸ್ ಹೊಂದಬಹುದಾಗಿದೆ'' ಎಂದಿದ್ದಾರೆ.

> ಸ್ವಂತ ಕೃಷಿ ಭೂಮಿ ಹೊಂದುವುದು ನಗರದ ಈಗಿನ ಟ್ರೆಂಡ್. ಕಾಂಕ್ರಿಟ್ ನಗರದೊಳಗೆ ಕೃಷಿ ಭೂಮಿಯೊಂದನ್ನು ಖರೀದಿಸಿ ವಾರಾಂತ್ಯದಲ್ಲಿ ಒಂಟಿಯಾಗಿ ಅಥವಾ ಸ್ನೇಹಿತರ, ಕುಟುಂಬದವರ ಜತೆ ಹಾಯಾಗಿ ಕೃಷಿ ಮಾಡುತ್ತಾ ಕಳೆಯಲು ಜನರು ಬಯಸುತ್ತಿದ್ದಾರೆ. ನಗರದಲ್ಲಿ ಫಾರ್ಮ್ ಲ್ಯಾಂಡ್ ಹೊಂದುವುದು ಆರೋಗ್ಯಸ್ನೇಹಿ, ಪರಿಸರಸ್ನೇಹಿ ಮತ್ತು ಪ್ರತಿಷ್ಠಿತ ವಿಷಯವೂ ಹೌದು. ತಮ್ಮ ಸ್ವಂತ ಭೂಮಿಯಲ್ಲಿ ತಾವೇ ಸೊಪ್ಪು ತರಕಾರಿ ಬೆಳೆದು ಬಳಸುವುದು ಖುಷಿ ನೀಡುವ ವಿಚಾರ ಕೂಡ.
>
> ಎಸ್. ಭಗಿರಥ । ಚೇರ್ಮನ್, ಎಎಸ್‌ಬಿ ಗ್ರೂಪ್ ಆಫ್ ಕಂಪನೀಸ್

ವರ್ಕ್ ಫ್ರಮ್ ಹೋಮ್‌ಗೂ ಸೂಕ್ತ

ಮೆಟ್ರೊ ಇತ್ಯಾದಿ ಕನೆಕ್ಟಿವಿಟಿ ಇರುವ ಮೈಸೂರು ರಸ್ತೆಯಂತಹ ನಗರದ ಹತ್ತಿರದ ಪ್ರದೇಶದಲ್ಲಿ ಫಾರ್ಮ್ ಲ್ಯಾಂಡ್ ಹೊಂದಿದ್ದರೆ ಫಾರ್ಮ್ ಹೌಸ್ ನಿಂದಲೇ ಪ್ರತಿನಿತ್ಯ ಆಫೀಸ್‌ಗೆ, ಶಾಲೆ ಕಾಲೇಜುಗಳಿಗೆ ಹೋಗಿಬರಬಹುದು. ಪ್ರತ್ಯೇಕ ಬಾಡಿಗೆ ಮನೆ ಅಥವಾ ಅಪಾರ್ಟ್‌ಮೆಂಟ್ ಇದ್ದವರು ವೀಕೆಂಡ್ ನಲ್ಲಿ ಫಾರ್ಮ್ ಲ್ಯಾಂಡ್‌ಗೆ ಹೋಗಬಹುದು. ಫಾರ್ಮ್‌ಲ್ಯಾಂಡ್‌ನಲ್ಲಿ ಕಾನೂನುರೀತ್ಯ ಫಾರ್ಮ್ ಹೌಸ್ ಕಟ್ಟಿಕೊಳ್ಳಲು ಅವಕಾಶವಿರುವುದರಿಂದ ಅಲ್ಲೇ ಉಳಿದುಕೊಳ್ಳಬಹುದು. ವರ್ಕ್ ಫ್ರಮ್ ಮಾಡುವವರು ಫಾರ್ಮ್ ಹೌಸ್‌ನಲ್ಲಿಯೇ ಹಾಯಾಗಿ ಕೆಲಸ ಮಾಡಬಹುದು. ಬಿಡುವು ಸಿಕ್ಕಾಗ ತೋಟದ ಕೆಲಸ ಮಾಡುತ್ತ ಹಾಯಾಗಿರಬಹುದು ಎಂದು ಮೈಸೂರು ರಸ್ತೆಯಲ್ಲಿ ಫಾರ್ಮ್ ಹೌಸ್ ಖರೀದಿಸಿರುವ ಸಂತೋಷ್ ಗೌಡ ಖುಷಿಯಿಂದ ಹೇಳಿದ್ದಾರೆ.

''ನಿವೇಶನಗಳ ದರಕ್ಕೆ ಹೋಲಿಸಿದರೆ ಫಾರ್ಮ್ ಲ್ಯಾಂಡ್‌ಗಳು ಶೇಕಡ 50-60ರಷ್ಟು ಕಡಿಮೆ ದರಕ್ಕೆ ದೊರಕುತ್ತವೆ. ಇಂತಹ ಭೂಮಿ ಖರೀದಿಗೆ ಸಾಲಸೌಲಭ್ಯವೂ ದೊರಕುತ್ತದೆ. ವಿವಿಧ ಮಾದರಿಯಲ್ಲಿ ಫಾರ್ಮ್‌ಹೌಸ್‌ಗಳನ್ನೂ ಡೆವಲಪರ್‌ಗಳೇ ಕಟ್ಟಿಕೊಡುತ್ತಿದ್ದಾರೆ. ಫಾರ್ಮ್ ಲ್ಯಾಂಡ್‌ನಲ್ಲಿಯೇ ತೇಗ, ನಿಂಬೆ, ಸಪೋಟ ಸೇರಿದಂತೆ ವಿವಿಧ ಬಗೆಯ ಮರಗಳು ಇರುತ್ತವೆ. ನಿಮಗೆ ಬೇಕಾದ ಗಿಡಗಳನ್ನು ನೆಡಬಹುದು. ಇವೆಲ್ಲವೂ ಭವಿಷ್ಯದಲ್ಲಿ ನಿಮಗೆ ಒಳ್ಳೆಯ ಆದಾಯ ತಂದುಕೊಡಬಹುದು. ನಗರದಲ್ಲಿ ವಾಸಿಸುವ ಕನಸು ಮತ್ತು ಕೃಷಿ ಭೂಮಿ ಹೊಂದುವ ಕನಸನ್ನು ಜೊತೆಯಾಗಿ ಈಡೇರಿಸಿಕೊಳ್ಳಲು ಇದು ಸೂಕ್ತ'' ಎಂದು ರಿಯಾಲ್ಟಿ ತಜ್ಞ ವಿಘ್ನೇಶ್ವರ ನಾಯಕ್ ಹೇಳಿದ್ದಾರೆ.

ನಿರ್ವಹಣೆಯೂ ಸುಲಭ

ನಗರದಲ್ಲಿ ಉದ್ಯೋಗ ಮಾಡುವವರಿಗೆ ಪ್ರತಿನಿತ್ಯ ಕೃಷಿ ಭೂಮಿ ನಿರ್ವಹಣೆ ಮಾಡುವುದು ಕಷ್ಟವಾಗಬಹುದು. ಇದಕ್ಕಾಗಿ ಫಾರ್ಮ್ ಹೌಸ್ ಡೆವಲಪರ್‌ಗಳೇ ಕೃಷಿಭೂಮಿ ನಿರ್ವಹಣೆಗೂ ವ್ಯವಸ್ಥೆ ಮಾಡಿರುತ್ತಾರೆ. ಫಾರ್ಮ್ ಲ್ಯಾಂಡ್ ಹೊಂದಿರುವವರು ತಮಗೆ ಬಿಡುವಿದ್ದಾಗ ಕೃಷಿಭೂಮಿಗೆ ಹೋಗುತ್ತಿರಬಹುದು. ''ಕೊರೊನಾದಂತಹ ಸಮಯದಲ್ಲಿ ನಾಳೆ ಲಾಕ್‌ಡೌನ್ ಎಂದರೆ ಇಂದೇ ಎಲ್ಲರೂ ಹೊರಟುಬಿಡುತ್ತಾರೆ. ತಮ್ಮ ಊರಿನ ಜಮೀನಿಗೋ, ಅಥವಾ ಬೇರೆಲ್ಲಾದರೂ ಹೋಗಿಬಿಡುತ್ತಾರೆ. ಊರಲ್ಲಿ ಜಮೀನು ಇಲ್ಲದವರು, ಜಮೀನು ಇದ್ದರೂ ಹೋಗಲು ಕಷ್ಟವೆನ್ನುವವರು ನಗರದೊಳಗೆ ಇಂತಹ ಫಾರ್ಮ್ ಲ್ಯಾಂಡ್ ಖರೀದಿಸಿ ಲಾಕ್‌ಡೌನ್‌ನಂತಹ ಸಮಯದಲ್ಲಿಯೂ ಟೆನ್ಷನ್ ಇಲ್ಲದೆ ಇರಬಹುದು'' ಎಂದು ಎಸ್. ಭಗಿರಥ ಅಭಿಪ್ರಾಯಪಟ್ಟಿದ್ದಾರೆ.

"Your life is as good as your mindset"

Advertorial

ಸಮಗ್ರ ಕೃಷಿ ಮಾದರಿ ಶಿವಮೊಗ್ಗದ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ

ಕೃಷಿ, ತೋಟಗಾರಿಕೆ ಮತ್ತು ಅರಣ್ಯದಲ್ಲಿ ಸ್ನಾತಕ, ಸ್ನಾತಕೋತ್ತರ ಮತ್ತು ಪಿಎಚ್‌ಡಿ ಪದವಿ ಅಧ್ಯಯನವನ್ನು ಒಳಗೊಂಡ ಸಮಗ್ರ ವಿಶ್ವವಿದ್ಯಾಲಯ ಎನಿಸಿಕೊಂಡ ಶಿವಮೊಗ್ಗ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯದ ನೂತನ ಮುಖ್ಯ ಆವರಣ ಸಾಗರ ತಾಲೂಕು ಇರುವಕ್ಕಿಯಲ್ಲಿ ಶುಭಾರಂಭಗೊಳ್ಳುತ್ತಿದೆ.

ಸಿಎಂ ಬಿ.ಎಸ್.ಯಡಿಯೂರಪ್ಪ ಅವರು ಜು.24ರಂದು ಬೆಳಗ್ಗೆ 11 ಗಂಟೆಗೆ ವರ್ಚುವಲ್ ಮೂಲಕ ವಿಶ್ವವಿದ್ಯಾಲಯದ ನೂತನ ಕೇಂದ್ರವನ್ನು ಉದ್ಘಾಟಿಸುವರು. ಕರಾವಳಿ, ಮಲೆನಾಡು, ಅರೆಮಲೆನಾಡು ಮತ್ತು ಬಯಲು ಪ್ರದೇಶದ ನಾಲ್ಕು ಹವಾಮಾನ ವಲಯ ಒಳಗೊಂಡ ವಿಶ್ವ ವಿದ್ಯಾಲಯವು ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ, ಚಿಕ್ಕಮಂಗಳೂರು, ಕೊಡಗು, ಉಡುಪಿ ಮತ್ತು ದಕ್ಷಿಣಕನ್ನಡ ಜಿಲ್ಲೆಗಳ ವ್ಯಾಪ್ತಿ ಒಳಗೊಂಡಿದೆ. ಇದರಡಿಯಲ್ಲಿ 4 ಪದವಿ ಕಾಲೇಜುಗಳು, 2 ಡಿಪ್ಲೋಮಾ ಕಾಲೇಜುಗಳಿವೆ. 4 ವಲಯಗಳಲ್ಲಿ 13 ಸಂಶೋಧನಾ ಕೇಂದ್ರಗಳು ವಿವಿಧ ವಿಷಯಗಳ ಬಗ್ಗೆ ಸಂಶೋಧನೆ ನಡೆಸುತ್ತಿವೆ. 4 ಕೃಷಿ ವಿಜ್ಞಾನ ಕೇಂದ್ರಗಳು ಹಾಗೂ 2 ವಿಸ್ತರಣಾ ಕೇಂದ್ರಗಳು ಸಹ ರೈತರಿಗೆ ವೈಜ್ಞಾನಿಕ ಮಾಹಿತಿ ಒದಗಿಸುತ್ತಿವೆ.

ಭತ್ತ, ಅಡಕೆ, ತೆಂಗು, ಗೋಡಂಬಿ(ಗೇರು), ದ್ವಿದಳ ಧಾನ್ಯಗಳು, ರಾಗಿ, ಏಲಕ್ಕಿ, ಕಾಳುಮೆಣಸು, ಸಾಂಬಾರ್ ಪದಾರ್ಥಗಳ ಬೆಳೆ ಅಭಿವೃದ್ಧಿಯಲ್ಲಿ ತನ್ನದೇ ಆದ ಕೊಡುಗೆಗಳನ್ನು ನೀಡುತ್ತಾ ರೈತರು ಮತ್ತು ಸಮಾಜದ ನಡುವೆಯೇ ಇದ್ದುಕೊಂಡು ಶೈಕ್ಷಣಿಕ ಚಟುವಟಿಕೆಗಳನ್ನು ನಡೆಸಿಕೊಂಡು ಬಂದಿದೆ.

ಶಿವಮೊಗ್ಗ ನಗರದ ನವುಲೆ ಕೃಷಿ ಮಹಾವಿದ್ಯಾಲಯದ ಆವರಣದಲ್ಲಿ 2013ನೇ ಏಪ್ರಿಲ್‌ನಲ್ಲಿ ಆರಂಭಗೊಂಡ ವಿಶ್ವವಿದ್ಯಾಲಯಕ್ಕೆ ವಿಸ್ತಾರವಾದ ಭೂಮಿಯನ್ನು ಒದಗಿಸುವ ಸಲುವಾಗಿ ರಾಜ್ಯ ಸರಕಾರ 2015ರಲ್ಲಿ ಸಾಗರ ತಾಲೂಕು ಇರುವಕ್ಕಿ, ಹೆಬ್ಬೋಡಿ ಮತ್ತು ನರಗುಂದದ ವಿವಿಧ ಸರ್ವೆ ನಂಬರ್‌ಗಳಲ್ಲಿ 787.06 ಎಕರೆ ಭೂಮಿಯನ್ನು ಒದಗಿಸಿತು.

ನೂತನ ಕೇಂದ್ರದ ಆವರಣದಲ್ಲಿ ಜೀವವೈವಿಧ್ಯತೆ ಸಂರಕ್ಷಣೆ, ಜೈವಿಕ ಇಂಧನ ಉದ್ಯಾನ, ಕೃಷಿ ಅರಣ್ಯ ಸಂಶೋಧನೆ, ತಳಿಗಳ ಸಂರಕ್ಷಣಾ ವಿಭಾಗ, ತೋಟಗಾರಿಕೆ ಬೆಳೆಗಳ ಸಂರಕ್ಷಣೆ, ತಾಯಿಗಿಡ, ಆಹಾರ ಬೆಳೆಗಳು, ತೋಟಗಾರಿಕೆ ಬೆಳೆಗಳು, ಪಶುಸಂಗೋಪನೆ, ಮೀನುಗಾರಿಕೆ ವಿಭಾಗ, ನವೋದ್ಯಮ ಕೇಂದ್ರಗಳು, ಜೇನ್ನೊಣ ಪಾರ್ಕ್, ಜಲಾನಯನ ಅಭಿವೃದ್ಧಿ ಘಟಕಗಳನ್ನು ಅಭಿವೃದ್ಧಿ ಪಡಿಸಲಾಗಿದೆ.

ನೇಗಿಲ ಮೇಲೆಯೇ ನಿಂತಿದೆ ಧರ್ಮ

ಇಂದು ಸಿಎಂ ಬಿ.ಎಸ್. ಯಡಿಯೂರಪ್ಪ ಅವರಿಂದ ಉದ್ಘಾಟನೆ

ವಿಶ್ವವಿದ್ಯಾಲಯದ ಇರುವಕ್ಕಿ ನೂತನ ಕೇಂದ್ರವನ್ನು ಅಂತಾರಾಷ್ಟ್ರೀಯ ಶೈಕ್ಷಣಿಕ ಕೇಂದ್ರವಾಗಿ ರೂಪಿಸಬೇಕೆಂಬುದು ರಾಜ್ಯ ಸರಕಾರ ಮತ್ತು ನಮ್ಮ ಕನಸು. ಈ ನಿಟ್ಟಿನಲ್ಲಿ ಈಗಾಗಲೆ ದಿಟ್ಟ ಹೆಜ್ಜೆ ಇಡಲಾಗಿದೆ. 60 ವಿದ್ಯಾರ್ಥಿಗಳ ಪ್ರವೇಶ ಸಹ ಆಗಿದೆ. ವಿಶ್ವವಿದ್ಯಾಲಯದ ಅಭಿವೃದ್ಧಿ ಜತೆಗೆ ಈ ಪ್ರದೇಶವನ್ನು ಶೈಕ್ಷಣಿಕವಾಗಿ ಅಭಿವೃದ್ಧಿಯತ್ತ ಕೊಂಡೊಯ್ಯುವುದು ನಮ್ಮ ಗುರಿ.

- ಡಾ. ಎಂ.ಕೆ.ನಾಯ್ಕ್, ಕುಲಪತಿಗಳು, ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ

- ಶಿವಮೊಗ್ಗದಲ್ಲಿ ಕೃಷಿ ಮಹಾವಿದ್ಯಾಲಯ
- ಮೂಡಿಗೆರೆಯಲ್ಲಿ ತೋಟಗಾರಿಕೆ ಕಾಲೇಜು
- ಪೊನ್ನಂಪೇಟೆಯಲ್ಲಿ ಅರಣ್ಯ ಕಾಲೇಜು
- ಹಿರಿಯೂರಲ್ಲಿ ತೋಟಗಾರಿಕೆ ಕಾಲೇಜು
- ಕತ್ತಲಗೆರೆಯಲ್ಲಿಯ ಕೃಷಿ ಡಿಪ್ಲೋಮಾ
- ಬ್ರಹ್ಮಾವರದಲ್ಲಿ ಕೃಷಿ ಡಿಪ್ಲೋಮಾ
- ಉಲ್ಲಾಳದಲ್ಲಿ ಗೋಡಂಬಿ ಸಂಶೋಧನಾ ಕೇಂದ್ರ
- ಶಿವಮೊಗ್ಗದಲ್ಲಿ ಅಡಕೆ ಸಂಶೋಧನಾ ಕೇಂದ್ರ
- 14 ಸಂಶೋಧನಾ ಕೇಂದ್ರಗಳು
- 4 ಕೃಷಿ ವಿಜ್ಞಾನ ಕೇಂದ್ರಗಳು

4,95,000 ಚದರ ಅಡಿ ಪ್ರದೇಶದಲ್ಲಿ ಆಡಳಿತ ಭವನ, ಬೆಳೆ ಉತ್ಪಾದನೆ ಮತ್ತು ಬೆಳೆ ಸಂರಕ್ಷಣೆ ವಿಭಾಗ, ಬೆಳೆ ಅಭಿವೃದ್ಧಿ ಮತು ಜೈವಿಕ ತಂತ್ರಜ್ಞಾನ ವಿಭಾಗ, ಸಮಾಜ ಮತ್ತು ಮೂಲ ವಿಜ್ಞಾನಗಳ ವಿಭಾಗ, ತೋಟಗಾರಿಕೆ ಮತ್ತು ಅರಣ್ಯ ವಿಭಾಗ, ಗ್ರಂಥಾಲಯ, ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ನಿಲಯಗಳು, ವಿದ್ಯುತ್ ಸ್ವಾವಲಂಬನೆಗಾಗಿ 400 ಕಿ.ಲೋ. ವ್ಯಾಟ್ ಸಾಮರ್ಥ್ಯದ ಸೋಲಾರ್ ವಿದ್ಯುತ್ ಘಟಕ, ಕೊಳಚೆ ನೀರು ಶುದ್ಧೀಕರಣ ಘಟಕ, ಸಂರಕ್ಷಿತ ಕಾಫಿ ತೋಟ, ನೆರಳುಮನೆ, ಪಾಲಿ ಹೌಸ್ ಅಭಿವೃದ್ಧಿಪಡಿಸಲಾಗಿದೆ.

2ನೇ ಹಂತದಲ್ಲಿ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವಸತಿಗೃಹಗಳು, ಬೃಹತ್ ಆಡಿಟೋರಿಯಮ್, ಕ್ರೀಡಾಂಗಣ, ಒಳ ಕ್ರೀಡಾಂಗಣ, ಆಸ್ಪತ್ರೆ, ಸ್ನಾತಕೋತ್ತರ ತರಗತಿಗಳ ವಿಭಾಗಗಳು, ಹೆಚ್ಚುವರಿ ಪ್ರಯೋಗಾಲಯಗಳು, ಹೆಚ್ಚುವರಿ ಹಾಸ್ಟೆಲ್‌ಗಳು, ಮಾನವ ಸಂಪನ್ಮೂಲ ವಿಭಾಗ, ಅತಿಥಿಗೃಹ, ಉಪಾಹಾರ ಗೃಹ ನಿರ್ಮಾಣ ಕೈಗೊಳ್ಳಲಾಗುತ್ತದೆ.

Agriculture Grand Challenges launched to promote startups

SPECIAL CORRESPONDENT
BENGALURU

The Centre for Cellular and Molecular Platforms (C-CAMP), the country's premier biosciences technology and innovation hub, on Friday announced the first nationwide Agriculture Grand Challenges under K-tech Centre of Excellence for Agri-innovation to identify promising innovations to address major problem areas of Indian agriculture.

For each winning startup, funding of up to ₹25 lakh, incubation, mentorship, and hand-holding, would be provided by C-CAMP.

The initiative is jointly supported by the Agriculture Department and Department of Electronics, IT, Biotechnology and S&T of the State, for promoting technology-driven entrepreneurship in the agriculture sector.

Deputy Chief Minister C.N. Ashwath Narayan, who is also Minister of IT, Biotechnology and S&T, launched the programme.

C.N. Ashwath Narayan

MoU

A memorandum of understanding (MoU) was signed for 'Indo-Israel Innovation Bridge' which has the objective of bringing together the startup ecosystems of both the countries in life sciences and agri-tech.

Zonathan Zadka, Consul General of Israel to South India, said, "The potential of the initiative is enormous and has already generated tangible cooperation between startups of the two countries." On the occasion, C-CAMP assisted indigenously developed portable COVID-19 vaccine coldchain equipment was officially handed over to the State government.

24-07-2021 Hindu Pg 06

For more information visit University Library Website
Web - uasbagrilibindia.org
E-mail- librarian@uasbangalore.edu.in